

# ವಸಂತದ ಪುಳಕದಲ್ಲಿ ರುಕ್ಮಿಣಿ

ಈಚೆಗೆ ತೆರೆಕಂಡ 'ಬಘೀರ' ಸಿನಿಮಾದಲ್ಲಿ ನಟ ಶ್ರೀಮುರಳಿ ಜೋಡಿಯಾಗಿದ್ದ ನಟಿ ರುಕ್ಮಿಣಿ ವಸಂತ್, ಮತ್ತೊಂದು ಸಿನಿಮಾ ಬಿಡುಗಡೆಯ ಖುಷಿಯಲ್ಲಿದ್ದಾರೆ. ಶಿವರಾಜ್ ಕುಮಾರ್ ನಟನೆಯ 'ಭೈರತಿ ರಣಗಲ್' ಸಿನಿಮಾ ಕೂಡ ನವೆಂಬರ್ 15ಕ್ಕೆ ಬಿಡುಗಡೆಯಾಗುತ್ತಿದ್ದು, ಅದರಲ್ಲೂ ರುಕ್ಮಿಣಿ ನಾಯಕಿಯಾಗಿದ್ದಾರೆ.

ಕನ್ನಡದೊಂದಿಗೆ ತಮಿಳು ಸಿನಿಮಾರಂಗದೆಡೆಗೂ ಹೆಜ್ಜೆ ಇಟ್ಟಿರುವ ರುಕ್ಮಿಣಿ, ತಮ್ಮ ಮುಂದಿರುವ ಈ ಅವಕಾಶಗಳ ಬಗ್ಗೆ ಸಂತಸದಿಂದ ಮಾತುಗಳನ್ನು ಹಂಚಿಕೊಂಡಿದ್ದಾರೆ. 'ನಾನು ನಿಜಕ್ಕೂ ಅದೃಷ್ಟವಂತೆ. ಅತ್ಯುತ್ತಮ ಪ್ರಾಜೆಕ್ಟ್‌ಗಳು ನನಗೆ ದೊರೆಯುತ್ತಿವೆ. ಪ್ರತಿ ಸಿನಿಮಾ ಕೂಡ ನನ್ನ ಬೆಳವಣಿಗೆಗೆ ಕಾರಣವಾಗುತ್ತಿದೆ ಹಾಗೂ ನನ್ನನ್ನು ಉತ್ತಮ ನಟಿಯಾಗುವತ್ತ ತಿದ್ದಿಕೊಳ್ಳಲು ಅವಕಾಶ ನೀಡುತ್ತಿದೆ. ಭಿನ್ನ ಭಿನ್ನ ಪಾತ್ರಗಳಲ್ಲಿ ಹಾಗೂ ಬೇರೆ ಬೇರೆ ತಂಡಗಳೊಂದಿಗೆ ಕಾಣಿಸಿಕೊಳ್ಳುವ ಅವಕಾಶಗಳು ನನ್ನೆಡೆಗೆ ಬರುತ್ತಿವೆ' ಎಂದು ಖುಷಿಯಾಗಿದ್ದಾರೆ.

ತಮಿಳು ಸಿನಿಮಾರಂಗ ಪ್ರವೇಶಿಸುತ್ತಿರುವ ಕುರಿತು ಮಾತನಾಡುತ್ತಾ, 'ನಟನೆ ಹಾಗೂ ಅಭಿವ್ಯಕ್ತಿಗೆ ಭಾಷೆಯ ಬೇಲಿಯಿಲ್ಲ. ಪ್ರತಿ ಸಿನಿಮಾರಂಗದಲ್ಲೂ ಕಲಿಕೆಯಿರುತ್ತದೆ. ದಕ್ಷಿಣ ಭಾರತದ ಪ್ರತಿಭಾವಂತರೊಂದಿಗೆ ಕೆಲಸ ಮಾಡುವ ಅದೃಷ್ಟ ನನ್ನದು' ಎಂದಿದ್ದಾರೆ.

ಪಾತ್ರಗಳ ಆಯ್ಕೆ ಕುರಿತು ಮಾತನಾಡಿರುವ ರುಕ್ಮಿಣಿ, 'ಸ್ಕ್ರಿಪ್ಟ್ ಅನ್ನು ಮುಂದಿಟ್ಟುಕೊಂಡು ನನ್ನ ಪಾತ್ರವನ್ನು ತಾಳೆ ಹಾಕುತ್ತೇನೆ. ಯಾಕೆಂದರೆ ಸ್ಕ್ರಿಪ್ಟ್ ಹೊರತಾಗಿ ಪಾತ್ರವೊಂದನ್ನೇ ಬೇರೆಯಾಗಿ ನೋಡಲಾಗುವುದಿಲ್ಲ. ಇಡೀ ಸಿನಿಮಾ ನಿರೂಪಣೆಯಲ್ಲಿ ನನ್ನ ಪಾತ್ರ ಮಿಳಿತವಾಗಬೇಕು' ಎನ್ನುತ್ತಲೇ, 'ಪ್ರತಿ ಸಿನಿಮಾದಲ್ಲಿಯೂ ಉತ್ತಮವಾದದ್ದನ್ನು ನೀಡುವ ಪ್ರಯತ್ನ ನನ್ನ ಕಡೆಯಿಂದ ಇದ್ದೇ ಇರುತ್ತದೆ' ಎಂದು ಭರವಸೆ ನೀಡಿದ್ದಾರೆ. ■

# ಭಟ್ಟರಿಂದ ತ್ರಿಕೋನ ಪ್ರೇಮಕಥೆ

'ಕರಟಕ ದಮನಕ' ಚಿತ್ರದ ಬಳಿಕ ನಿರ್ದೇಶಕ ಯೋಗರಾಜ್ ಭಟ್ 'ಮುಂಗಾರು ಮಳೆ' ನಿರ್ಮಾಪಕ ಇ. ಕೃಷ್ಣಪ್ಪ ಜೊತೆ ಕೈಜೋಡಿಸಿದ್ದು, 'ಮನದ ಕಡಲು' ಎಂಬ ಸಿನಿಮಾ ತಯಾರಿಯಲ್ಲಿ ತೊಡಗಿಕೊಂಡಿದ್ದಾರೆ.



'ಸದ್ಯ ಚಿತ್ರಕ್ಕೆ ಮೂರು–ನಾಲ್ಕು ಶೀರ್ಷಿಕೆಗಳನ್ನು ಯೋಚಿಸಲಾಗಿದ್ದು ಅದರಲ್ಲಿ 'ಮನದ ಕಡಲು' ಕೂಡ ಒಂದು. ಇದು ವರ್ಕಿಂಗ್ ಟೈಟಲ್. ಇದೇ ಅಂತಿಮ ಶೀರ್ಷಿಕೆಯಲ್ಲ' ಎನ್ನುತ್ತಿವೆ ಚಿತ್ರತಂಡದ ಮೂಲಗಳು. ಈ ಹಿಂದೆ 'ಫಿಸಿಕ್ಸ್ ಟೀಚರ್' ಎಂಬ ಸಿನಿಮಾವನ್ನು ನಿರ್ದೇಶಿಸಿ, ನಟಿಸಿದ್ದ ಸುಮುಖ್ ಈ ಚಿತ್ರದ ನಾಯಕರಾಗಿದ್ದಾರೆ.

ಚಿತ್ರದಲ್ಲಿ ಇಬ್ಬರು ನಾಯಕಿಯರಿದ್ದು, ಇದೊಂದು ತ್ರಿಕೋನ ಪ್ರೇಮಕಥೆ. ವೈದ್ಯರೊಬ್ಬರ ಬದುಕಿನ ತಿರುವಿನಿಂದ ಶುರುವಾಗುವ ಪ್ರೇಮಕಥೆ ರಾಜ್ಯದ ಗಡಿ ದಾಟಿ ಮಹಾರಾಷ್ಟ್ರದಲ್ಲಿಯೂ ನಡೆಯುತ್ತದೆ. ಬೆಂಗಳೂರು, ಮಂಗಳೂರು, ಮಹಾರಾಷ್ಟ್ರದಲ್ಲಿ ಚಿತ್ರೀಕರಣ ನಡೆದಿದೆ. ಈಗಾಗಲೇ ಚಿತ್ರದ ಬಹುಭಾಗ ಚಿತ್ರೀಕರಣ ಪೂರ್ಣಗೊಂಡಿದ್ದು, ಕೆಲವೇ ದಿನಗಳಲ್ಲಿ ಸಿನಿಮಾ ಕುರಿತು ಮತ್ತಷ್ಟು ಮಾಹಿತಿಗಳು ಘೋಷಣೆಯಾಗಲಿವೆ. ■

# 'ರಕ್ಕಸಪುರದೋಳ್' ಅರ್ಚನಾ

'ಹಾಸ್ಟೆಲ್ ಹುಡುಗರು ಬೇಕಾಗಿದ್ದರೆ' ಸಿನಿಮಾದಿಂದ ಮುನ್ನೆಲೆಗೆ ಬಂದ ನಟಿ ಅರ್ಚನಾ ಕೊಟ್ಟಿಗೆ, ರಾಜ್ ಬಿ. ಶೆಟ್ಟಿ ಜೊತೆ ನಟಿಸುತ್ತಿದ್ದು, ಪರ್ಫಾರ್ಮೆನ್ಸ್ ಆಧರಿತವಾದ ಈ ಪಾತ್ರ ತಮಗೆ ಮತ್ತಷ್ಟು ಹೊಸ ದಾರಿಗಳನ್ನು ತೆರೆಯುವ ನಿರೀಕ್ಷೆ ವ್ಯಕ್ತಪಡಿಸಿದ್ದಾರೆ.

ನಟ– ನಿರ್ದೇಶಕ ರಾಜ್ ಬಿ. ಶೆಟ್ಟಿ ಜೊತೆ 'ರಕ್ಕಸಪುರದೋಳ್' ಸಿನಿಮಾದಲ್ಲಿ ಅವರು ನಟಿಸುತ್ತಿದ್ದು, ತಮ್ಮ ಪಾಲಿಗೆ ಈ ಪಾತ್ರ ಒಲಿದಿದ್ದು ಹೇಗೆ ಎಂಬುದರ ಬಗ್ಗೆ ಉತ್ಸಾಹದಿಂದ ಮಾತನಾಡಿದ್ದಾರೆ.



'ನಾನು ಬೇರೆ ಪ್ರಾಜೆಕ್ಟ್‌ನ ಶೂಟಿಂಗ್‌ನಲ್ಲಿದ್ದಾಗ ಸ್ಟಂಟ್ ಡೈರೆಕ್ಟರ್ ರವಿ ವರ್ಮ ಅವರನ್ನು ಭೇಟಿಯಾಗಿದ್ದೆ. ಕೆಲವು ದಿನಗಳ ನಂತರ, ಅವರು ರಾಜ್ ಬಿ. ಶೆಟ್ಟಿ ಜೊತೆ ಸಿನಿಮಾ ಮಾಡುತ್ತಿರುವುದಾಗಿ ಹೇಳಿದ್ದರು. ನನಗೂ ಒಂದು ಕಥೆ ಕೇಳಲು ಹೇಳಿದ್ದರು. ನಾನು ಸ್ಕ್ರಿಪ್ಟ್ ಕೇಳಿದೆ. ತುಂಬಾ ಇಷ್ಟವಾಯಿತು. ಆದರೆ ನಾನು ಸಿನಿಮಾಗೆ ಆಯ್ಕೆಯಾಗಿದ್ದ ಬಗ್ಗೆ ಏನೂ ತಿಳಿದಿರಲಿಲ್ಲ. ಸಿನಿಮಾ ಮುಹೂರ್ತ ಸಂದರ್ಭದಲ್ಲಿಯೇ ನಾನೂ ಸಿನಿಮಾ ಭಾಗವಾಗಿರುವುದು ತಿಳಿಯಿತು' ಎಂದು ಆಶ್ಚರ್ಯ ವ್ಯಕ್ತಪಡಿಸಿದ್ದಾರೆ.

'ನಾನು ಸಾಕಷ್ಟು ಪಾತ್ರಗಳಿಗೆ ಆಡಿಷನ್ ನೀಡಿದ್ದೇನೆ. ಕೆಲವು ಪಾತ್ರಗಳು ದೊರೆತಿದ್ದಕ್ಕೆ ಖುಷಿಪಟ್ಟಿದ್ದೇನೆ, ಮತ್ತಷ್ಟು ಪಾತ್ರಗಳು ಸಿಗದಿದ್ದಕ್ಕೆ ಬೇಸರವೂ ಆಗಿದೆ. ಆದರೆ ಆಗುವುದೆಲ್ಲವೂ ಒಳ್ಳೆಯದಕ್ಕೆ ಅನ್ನಿಸುತ್ತಿದೆ' ಎಂದಿದ್ದಾರೆ.

ಈ ಸಿನಿಮಾದಲ್ಲಿ ಪರ್ಫಾರ್ಮೆನ್ಸ್ ಆಧರಿತ ಪಾತ್ರ ತಮ್ಮದಾಗಿದ್ದು, ಉತ್ತಮ ನಟನೆಯಿಂದ ಪ್ರೇಕ್ಷಕರಿಗೆ ಹತ್ತಿರವಾಗುವುದಾಗಿ ಹೇಳಿದ್ದಾರೆ. ■